ದಿನಾಂಕಃ **01.06.2024** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ ಎಚ್.ಎಸ್.ಸಿ. ವಕೀಲರಿಂದಃ-

01. ನನ್ನ ಸ್ವಂತ ಊರು ನಡುವಿನಹಳ್ಳಿ ಇದ್ದು, ಈಗ ನಾನು ಹರಪನಹಳ್ಳಿ ತಾಲ್ಲೂಕಿನ ಕೋಡಿಹಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ಕುರುಬರ ಮಲ್ಲಪ್ಪನಿಗೆ ಎಷ್ಟು ಜನ ಮಕ್ಕಳು ಎಂದರೆ ಆತನಿಗೆ ಇಬ್ಬರು ಹೆಂಡತಿಯರು ಮತ್ತು 4 ಜನ ಮಕ್ಕಳು ಇರುತ್ತಾರೆ. ನಾನು ಸ್ವತಃ ಹೇಳುತ್ತೇನೆ ನನ್ನ ತಂದೆ ದಿಳ್ಳೆಪ್ಪ ಕುರುಬರ ಮಲ್ಲಪ್ಪನ ಹಿರಿಯ ಹೆಂಡತಿಯ ಮಗ. ಕುರುಬರ ಮಲ್ಲಪ್ಪನ 2 ನೇ ಹೆಂಡತಿಯ ಹೆಸರು ಗಂಗಮ್ಮ ಇರುತ್ತದೆ. ಗಂಗಮ್ಮನಿಗೆ 3 ಜನ ಮಕ್ಕಳಿದ್ದು ಅವರ ಹೆಸರುಗಳು ಕೊಟ್ರಪ್ಪ, ದೇವೇಂದ್ರಪ್ಪ ಮತ್ತು ಫಕ್ಕೀರಮ್ಮ. ಗಂಗಮ್ಮನಿಗೆ ನಾಗವ್ವ ಎಂಬ ಮಗಳು ಕೂಡಾ ಇದ್ದಳು ಎಂದರೆ ಸರಿ. ಸದರಿ ನಾಗವ್ವ ಪೌತಿಯಾಗಿದ್ದು ಆಕೆಗೆ ಜಡಿಯಪ್ಪನೆಂಬ ಮಗನಿದ್ದಾನೆ ಎಂದರೆ ಸರಿ. ಸದರಿ ಜಡಿಯಪ್ಪನನ್ನು ನಾವು ಈ ದಾವೆಗೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಅವರು ನಮ್ಮ ಕುಟುಂಬಕ್ಕೆ ಸೇರಿಲ್ಲ. ಕುರುಬರ ಮಲ್ಲಪ್ಪನ ಹೆಂಡತಿ ಮಲ್ಲಮ್ಮನಿಗೆ ನಿಂಗವ್ವ ಎಂಬ ಮಗಳೂ ಕೂಡಾ ಇದ್ದಾಳೆ ಎಂದರೆ ಸುಳ್ಳು. ದಿಳ್ಳೆಪ್ಪ ಯಾವಾಗ ಮೃತಪಟ್ಟರು ಎಂದರೆ ನಾನು ಚಿಕ್ಕವನಿರುವಾಗಲೇ ಅಂದರೆ ಸುಮಾರು 40 ವರ್ಷಗಳ ಹಿಂದೆ ಮೃತಪಟ್ಟಿದ್ದಾರೆ. ದಿಳ್ಳೆಪ್ಪ ನಡುವಿನಹಳ್ಳಿಯಲ್ಲಿ ಮೃತಪಟ್ಟರು.

02. ದಾವಾ ಸ್ವತ್ತುಗಳು ದಾಸನಹಳ್ಳಿಯಲ್ಲಿ ಇರುತ್ತವೆ. ದಾವಾ ಸ್ವತ್ತುಗಳ ಸರ್ವೇ ನಂಬರುಗಳು ಮತ್ತು ಅವುಗಳ ವಿಸ್ತೀರ್ಣವನ್ನು ನಾನು ಹೇಳಬಲ್ಲೆ. ಸ. ನಂ. 70 ಬಿ ಯಲ್ಲಿ 01 ಎಕರೆ 08 ಸೆಂಟ್ಸ, ಸ. ನಂ. 76 ಇ ನಲ್ಲಿ 01 ಎಕರೆ 81 ಸೆಂಟ್ಸ ಮತ್ತು ಸ.ನಂ. 50 ಸಿ ಯಲ್ಲಿ 5 ಎಕರೆ ಇರುತ್ತವೆ. ನಾನು ದಾವಾ ಸ್ವತ್ತುಗಳು ಇರುವ ದಾಸನಹಳ್ಳಿಯಲ್ಲಿ ವಾಸ ಮಾಡುತ್ತಿಲ್ಲ. ನಾನು ನಡುವಿನಹಳ್ಳಿಯಲ್ಲಿಯೂ ಕೂಡಾ ವಾಸ ಮಾಡುತ್ತಿಲ್ಲ. ನಾನು ನಡುವವಿನಹಳ್ಳಿಗೆ ಮಾತ್ರ ಹೋಗಿದ್ದು, ದಾವಾ ಸ್ವತ್ತುಗಳನ್ನು ನೋಡಿಲ್ಲ ಎಂದರೆ ನನ್ನನ್ನು ಆಸ್ತಿಗಳ ಒಳಗಡೆ ಬಿಟ್ಟುಕೊಳ್ಳುವುದಿಲ್ಲ. ಸ. ನಂ. 50 ಸಿ ಆಸ್ತಿಯ ಚೆಕ್ಕುಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ಅದೇ ರೀತಿ ನನಗೆ ಸ. ನಂ. 70 ಬಿ ಮತ್ತು ಸ. ನಂ. 76 ಇ ಆಸ್ತಿಗಳ ಚೆಕ್ಕುಬಂದಿಗಳನ್ನೂ ಕೂಡಾ ಹೇಳಲು ಆಗುವುದಿಲ್ಲ.

03. ದಾವಾ ಸಲ್ಲಿಸಲು ನಮ್ಮ ವಕೀಲರಿಗೆ ಮಾಹಿತಿಯನ್ನು ಯಾರು ತಿಳಿಸಿದರು ಎಂದರೆ ನಮ್ಮ ಊರಿನ ಯಜಮಾನರಾದ ಬಸಪ್ಪ ತಿಳಿಸಿದ್ದರು, ಸದರಿ ಬಸಪ್ಪ ಈಗ ಮೃತಪಟ್ಟಿದ್ದಾರೆ. ಸದರಿ ಬಸಪ್ಪ ನಮ್ಮ ವಕೀಲರಿಗೆ ತಿಳಿಸಿದ ಮಾಹಿತಿ ಮೇರೆಗೆ ನಮ್ಮ ವಕೀಲರು ಈ ದಾವೆಯನ್ನು ತಯಾರಿಸಿದ್ದಾರೆ ಎಂದರೆ ಸರಿ. ವಾದ ಪತ್ರವನ್ನು ವಕೀಲರು ತಯಾರಿಸಿದ ನಂತರ ಅದರ ಮೇಲೆ ನಾನು ಮತ್ತು ನನ್ನ ಅಣ್ಣ ಇಬ್ಬರೂ ಸಹಿ ಮಾಡಿದ್ದೇವೆ. ದಾವಾ ಆಸ್ತಿಗಳು ಎಲ್ಲಿ ಇವೆ, ಎಷ್ಟು ವಿಸ್ತೀರ್ಣ ಇವೆ ಎಂಬ ಮಾಹಿತಿ ಸದರಿ ಬಸಪ್ಪನಿಗೆ ಮಾತ್ರ ಗೊತ್ತು ನನಗೆ ಗೊತ್ತಿಲ್ಲ ಎಂದರೆ ಸರಿ. ಬಸಪ್ಪ ಹೇಳಿದ ನಂತರವೇ ನನಗೆ

ದಾವಾ ಸ್ವತ್ತುಗಳ ಬಗ್ಗೆ ಗೊತ್ತಾಯಿತು ಎಂದರೆ ಇಲ್ಲ, ಅದಕ್ಕಿಂತ ಮುಂಚೆಯೇ ನನಗೆ ದಾವಾ ಸ್ವತ್ತುಗಳ ಬಗ್ಗೆ ಗೊತ್ತಿತ್ತು. ನಾವು ಸುಮಾರು 30 ವರ್ಷಗಳಿಂದ ದಾಸನಹಳ್ಳಿ ಅಥವಾ ನಡುವಿನಹಳ್ಳಿಯಲ್ಲಿ ವಾಸ ಮಾಡುತ್ತಿಲ್ಲ ಎಂದರೆ ಹೌದು, ಆದರೆ ಅಲ್ಲಿಗೆ ಓಡಾಡಿಕೊಂಡು ಇದ್ದೇವೆ. ಅಲ್ಲಿಗೆ ನಮ್ಮ ತಂದೆ-ತಾಯಿ ಇದ್ದಾಗ ಬಹಳ ಸಲ ಹೋಗಿ ಬಂದಿದ್ದೆವು. ತಂದೆ-ತಾಯಿ ಮೃತಪಟ್ಟ ನಂತರ ಕಡಿಮೆ ಸಲ ಹೋಗಿದ್ದೇವೆ.

04. ನನಗೆ ಗೊತ್ತಿದ್ದಂತೆ ದಿಳ್ಳೆಪ್ಪ ಆತನ ಚಿಕ್ಕಂದಿನಲ್ಲಿ ಕೋಡಿಹಳ್ಳಿ ಗ್ರಾಮದಲ್ಲಿ ಇದ್ದರು. ಕೋಡಿಹಳ್ಳಿಯಲ್ಲಿ ದಿಳ್ಳೆಪ್ಪ ತನ್ನ ಹೆಂಡತಿಯ ಮನೆಯಲ್ಲಿ ಇದ್ದ. ದಿಳ್ಳೆಪ್ಪನಿಗೆ ಮದುವೆಯೇ ಆಗಿರಲಿಲ್ಲ ಎಂದರೆ ಸರಿಯಲ್ಲ. 30 ವರ್ಷಗಳ ಹಿಂದೆ ದಿಳ್ಳೆಪ್ಪ ಮದುವೆಯಾಗದೇ ಕೋಡಿಹಳ್ಳಿಯಲ್ಲಿ ಮೃತಪಟ್ಟಿದ್ದ ಎಂದರೆ ಸರಿಯಲ್ಲ. ವಾದಿಗಳು ದಿಳ್ಳೆಪ್ಪನ ಮಕ್ಕಳಲ್ಲ ಎಂದರೆ ಸರಿಯಲ್ಲ. ಸ. ನಂ. 50 ಸಿ ನಲ್ಲಿರುವ ಎರಡೂವರೆ ಎಕರೆ ಜಮೀನನ್ನು ಕುರಿ ಮಲ್ಲಪ್ಪನ 2 ನೇ ಹೆಂಡತಿ ಗಂಗಮ್ಮ ಜೀವಂತವಿರುವಾಗಲೇ ದಿಳ್ಳೆಪ್ಪನ ಹಿಸ್ಸೆಗೆ ಕೊಟ್ಟಿದ್ದರು ಎಂದರೆ ಸರಿಯಲ್ಲ. ದಿಳ್ಳೆಪ್ಪನು ಸದರಿ ಎರಡೂವರೆ ಎಕರೆ ಜಮೀನನ್ನು ನಡುವಿನಹಳ್ಳಿ ಶಿವಮೂರ್ತೆಪ್ಪನಿಗೆ ಕ್ರಯ ಮಾಡಿದ್ದರು ಎಂದರೆ ಸರಿಯಲ್ಲ.

ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದೂಡಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹೂವಿನ ಹಡಗಲಿ.